**OS No.5/2014 DW.2**

ದಿನಾಂಕಃ-07-10-2021 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಎಸ್.ವಿ.ಜೆ ವಕೀಲರಿಂದ ವಾದಿ ಪರವಾಗಿ**

ನಾನು ಒಕ್ಕಲುತನ ಮಾಡಿಕೊಂಡು ಇದ್ದೇನೆ. ನಾನು ಮೊದಲು ರಾಜಕೀಯ ಕ್ಷೇತ್ರದಲ್ಲಿ ಇದ್ದು ಈಗ ಸಕ್ರಿಯವಾಗಿಲ್ಲ. 1978 ರಿಂದ 1983 ರಲ್ಲಿ ಮುಧೋಳ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದೆ ಎಂದರೆ ಸರಿ. ಈಗಲೂ ಸಹ ನಾನು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳುತ್ತಿದ್ದೇನೆ ಎಂದರೆ ಸರಿಯಲ್ಲ. 1976 ರಲ್ಲಿ ಕಳಸಪ್ಪ ಕಾಳೆರವರು ಮೃತರಾಗಿದ್ದಾರೆ. ಸದರಿಯವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಮಗಳು. ಕಳಸಪ್ಪ ಕಾಳೆಯವರ ಮಕ್ಕಳ ಪೈಕಿ ಸುಶೀಲಾಬಾಯಿ ಹಿರಿಯವಳು ಎಂದರೆ 3 ನೇಯವಳು ಅಂತಾ ಸಾಕ್ಷಿ ಹೇಳುತ್ತಾರೆ. ಸದರಿಯವರು ನನಗೆ ಅಕ್ಕ. ವಾದಿ ನನಗೆ ತಮ್ಮನಾಗಬೇಕು. ಗೋಪಾಲ ಕಾಳೆ ಈಗ ಜೀವಂತ

ಇಲ್ಲ. ಪುಂಡಲಿಕ ಕಾಳೆ ನಮ್ಮ ಅಣ್ಣನಾಗಬೇಕು. ಸುಶೀಲಾಬಾಯಿ ದಾವಾ ಸ್ವತ್ತನ್ನು ದಿಃ09.02.1983 ರಂದು ಖರೀದಿಸಿದ್ದರು ಎಂದರೆ ಸರಿ. ದಾವಾ ಸ್ವತ್ತು ಅನುಸೂಚಿ ಒಂದನೇ ಸ್ವತ್ತನ್ನು ಖರೀಸಿದ್ದರು ಎಂದರೆ ಸರಿ. ಖರೀದಿ ಮಾಡಿದಾಗ ಅದು ಖುಲ್ಲಾ ನಿವೇಶನೆ ಆಗಿತ್ತು ಎಂದರೆ ಸರಿ. ಸದರಿ ಸ್ವತ್ತು ಬಸ್ ಸ್ಟ್ಯಾಂಡಿನ ಎದುರುಗಡೆ ಬರುತ್ತದೆ ಎಂದರೆ ಸರಿ. 1985 ರಲ್ಲಿ ನಾನು ಮತ್ತು ಸುಶೀಲಾಬಾಯಿ ಒಂದು ಪಾಲುದಾರಿಕೆ ಸಂಸ್ದೆಯನ್ನು ಪ್ರಾರಂಭ ಮಾಡಿದೆವು ಎಂದರೆ ಸರಿ. ಕೆ.ಎಸ್.ಎಫ್.ಸಿ ಯಲ್ಲಿ ಸಾಲ ಮಾಡಿ ಸದರಿ ನಿವೇಶನದಲ್ಲಿ ಪಾಲುದಾರಿಕೆ ಮಾಡಿಕೊಂಡು ಒಂದು ಹೋಟೆಲ ಉದ್ಯಮ ಪ್ರಾರಂಭ ಮಾಡಿದೆವು ಎಂದರೆ ಸರಿ. ಸದರಿ ದಾವಾ ಐಟಂ ನಂ.1 ಸ್ವತ್ತನ್ನು ಭೋಜಾಕ್ಕೆ ಹಾಕಿ (ಮಾರ್ಟಗೆಜ) ಸಾಲ ಪಡೆಯಲಾಗಿತ್ತು ಎಂದರೆ ಸರಿ. ಸಾಲವನ್ನು ಪಾಲುದಾರಿಕೆ ಸಂಸ್ದೆಯಿಂದ ಆದಾಯದಿಂದಲೇ ಸದರಿ ಸಾಲ ತೀರಿಸಿದೆ ಎಂದರೆ ಸರಿ. ಸಾಲ ತಿರುವಳಿ ಆದ ನಂತರ ಕೆ.ಎಸ್.ಎಫ್.ಸಿ ರವರು ಸದರಿ ಸ್ವತ್ತನ್ನು ಪಾಲುದಾರಿಕೆ ಸಂಸ್ದೆಗೆ ಬರೆದುಕೊಂಡಿದ್ದಾರೆ ಎಂದರೆ ಸರಿ. ಪಾಲುದಾರಿಕೆ ಸಂಸ್ದೆಯಿಂದ ನಡೆಸುತ್ತಿದ್ದ ಹೋಟೆಲನ ಹೆಸರು ಪ್ರಶಾಂತ ಹೋಟೆಲ ಆಗಿತ್ತು ಎಂದರೆ ಸರಿ. ನಾನು ಆದಾಯ ತೆರಿಗೆ ರಿಟರ್ನನ್ನು ಕಾಲಕಾಲಕ್ಕೆ ಸಲ್ಲಿಸುತ್ತಾ ಬಂದಿದ್ದೇನೆ. ಅದೇ ರೀತಿ ಪಾಲುದಾರಿಕೆ ಸಂಸ್ದೆಯಿಂದ ಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸನ್ನು ಸಲ್ಲಿಸುತ್ತಾ ಇದ್ದೇವೆ. ಪಾಲುದಾರಿಕೆ ಸಂಸ್ದೆಯನ್ನು ದಿಃ19.04.1985 ರಲ್ಲಿ ಪ್ರಾರಂಭಿಸಲಾಗಿದೆ ಎಂದರೆ ನೋಂದಾವಣಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಪಾಲುದಾರಿಕೆ ಸಂಸ್ದೆ ನೋಂದಾವಣಿ ಆಗುವ ಕಾಲಕ್ಕೆ ದಾವಾ ಐಟಂ ನಂ.1 ರ ಸ್ವತ್ತನ್ನು ಪಾಲುದಾರಿಕೆಯ ಸಂಸ್ದೆಯ ಆಸ್ತಿ ಅಂತಾ ತೋರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ಸ್ವತ್ತಿನಲ್ಲಿ ಪಾಲುದಾರಿಕೆ ಸಂಸ್ದೆಯ ಹೋಟೆಲ ಉದ್ಯಮವನ್ನು ನಡೆಸಲಾಗುತಿತ್ತು ವಿನಹಃ ದಾವಾ ಐಟಂ ಸ್ವತ್ತು ಪಾಲುದಾರಿಕೆ ಸಂಸ್ದೆಯ ಅಸ್ತಿ ಆಗಿರಲಿಲ್ಲ ಎಂದರೆ ಸರಿಯಲ್ಲ. ಉತಾರೆಯಲ್ಲಿಯು ಸಹ ದಾವಾ ಐಟಂ ನಂ.1 ನೇ ಸ್ವತ್ತನ್ನು ಪ್ರಶಾಂತ ಹೋಟೆಲ ಅಂತಾ ತೋರಿಸದೆ ಸುಶೀಲಾಬಾಯಿ ಅವರ ಹೆಸರು ತೋರಿಸಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನೇ ಸ್ವತ್ತು ಪಾಲುದಾರಿಕೆ ಸಂಸ್ದೆಯ ಸ್ವತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿದ್ದೇನೆ. ಸಾಕ್ಷಿಯು ಈಗ ನಿಡಿ-399 ನ್ನು

ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯಲ್ಲಿ ಪ್ರಶಾಂತ ಹೋಟೆಲನ ಹೆಸರು ನಮೂದಿಸಿಲ್ಲ ಎಂದರೆ ಸಾಕ್ಷಿಯು ಪಾಲುದಾರಿಕೆ ಸಂಸ್ದೆಯ ಹೆಸರನ್ನು ನಮೂದಿಸಿದೆ ಎಂದು ಹೇಳುತ್ತ್ರಾರೆ. ನಾನು ನಿಡಿ-399 ರಿಂದ ನಿಡಿ-418 ರವರೆಗಿನ ಯಾವುದೇ ದಾಖಲೆಗಳಲ್ಲಿ ಪ್ರಶಾಂತ ಹೋಟೆಲ ಉದ್ದಿಮೆ ದಾವಾ ಐಟಂ ನಂ.1 ನೇ ಸ್ವತ್ತು ಸಿಟಿಎಸ್. ನಂ.5325 ರಲ್ಲಿ ಎಲ್ಲಿಯು ನಮೂದು ಇಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಬೇರೆ ಕಡೆಗೆ ದಾಖಲೆಗಳು ಇವೆ ಎಂದು ಹೇಳುತ್ತಾರೆ. ನಿಡಿ-399 ರಲ್ಲಿ ನನ್ನ ಹೆಸರನ್ನು ಸುಶೀಲಾಬಾಯಿರವರ ಮರಣಾನಂತರ ಹಚ್ಚಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1985 ರಲ್ಲಿಯೇ ಮೊದಲಬಾರಿಗೆ ದಾವಾ ಐಟಂ ನಂ.1 ನೇ ಸ್ವತ್ತಿಗೆ ಸಂಬಂಧಿಸಿದಂತೆ ಉತಾರೆಯಲ್ಲಿ ನಮೂದಿಸಲಾಗಿತ್ತು. ನಿಡಿ-399 ರ ಪ್ರಕಾರ ದಿಃ02.08.2012 ರಂದು ಆದೇಶದನ್ವಯ ನನ್ನ ಹೆಸರನ್ನು ನಮೂದಿಸಲಾಗಿತ್ತು ಎಂದರೆ ಸಾಕ್ಷಿಯು ಬರೆದಿದ್ದು ಇದೆ, ಆದರೆ ಅದಕ್ಕಿಂತ ಮುಂಚೆ ನನ್ನ ಹೆಸರು ನಮೂದು ಇತ್ತು. ನಮ್ಮ ಅಕ್ಕ ಸುಶೀಲಾಬಾಯಿ 2011 ರಲ್ಲಿ ಮೃತರಾಗಿದ್ದರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ನಡುವೆ ಕಂದಾಯ ಇಲಾಖೆಗಳಲ್ಲಿ ಸ್ವತ್ತಿಗೆ ಸಂಬಂಧಿಸಿದ ಪ್ರಕರಣಗಳು ಇದ್ದವು. ಪ್ರಕರಣ ನಡೆದ ನಂತರ ತಹಶೀಲ್ದಾರವರ ಆದೇಶದ ಪ್ರಕಾರ ನಿಪಿ-399 ರ ಪ್ರಕಾರ ಹೆಸರನ್ನು ಹಚಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ಸುಶೀಲಾಬಾಯಿ ಮೃತರಾಗುವವರೆಗೂ ಸಿಟಿಎಸ್.5325 ಕ್ಕೆ ಸಂಬಂಧಿಸಿದಂತೆ ಯಾವ ದಾಖಲೆಗಳಲ್ಲಿ ನಾನು ಮಾಲೀಕ ಅಂತಾ ನಮೂದು ಇರಲಿಲ್ಲ ಎಂದರೆ ಸರಿಯಲ್ಲ. ಸುಶೀಲಾಬಾಯಿ ಅವಿವಾಹಿತರು ಎಂದರೆ ಸರಿ. ಸುಶೀಲಾಬಾಯಿ ಮರಣ ಹೊಂದುವ ಪೂರ್ವದಲ್ಲಿ ತಂದೆ-ತಾಯಿ ಮರಣ ಹೊಂದಿದ್ದರು ಎಂದರೆ ಸರಿ. ಸುಶೀಲಾಬಾಯಿ ಮೃತರಾಗುವ ಪೂರ್ವದಲ್ಲಿ ಎರಡು ಸಹೋದರರು ಗೋಪಾಲ ಮತ್ತು ಪುಂಡಲಿಕ ಮೃತರಾಗಿದ್ದರು. ಸುಶೀಲಾಬಾಯಿ ಮರಣಾಂತರ ನಾನು ಮತ್ತು ಸುರೇಶ ಕಾಳೆ ನೇರ ವಾರಸುದಾರರು ಆಗಿದ್ದೆವು ಎಂದರೆ ಸರಿ. ಸುಶೀಲಾಬಾಯಿ ಮರಣಾನಂತರ ಆಕೆಯ ಸ್ವತ್ತುಗಳು ಎಲ್ಲಾ ನನಗೆ ಮತ್ತು ಸುರೇಶರವರಿಗೆ ಹೋಗಬೇಕು ಎಂದರೆ ಅದು ಕಾನೂನಿಗೆ ಗೊತ್ತು ನನಗೆ ಗೊತ್ತಾಗುವುದಿಲ್ಲ ಅಂತಾ ಹೇಳುತ್ತಾರೆ. ಸುಶೀಲಾಬಾಯಿರವರು ಮರಣ

ಪತ್ರವನ್ನು ಬರೆದಿರಲಿಲ್ಲ ಎಂದರೆ ಸರಿ. ಸುಶೀಲಾಬಾಯಿ ಪ್ರಶಾಂತ ಹೋಟೆಲ ತಮ್ಮ ಪಶ್ಚಾತ ನನಗೆ ಬರಬೇಕು ಎಂದು ಪತ್ರವನ್ನು ಬರೆದಿಲ್ಲ ಎಂದರೆ ಸರಿ. ನಿಪಿ-6 ರ ಪಾಲುದಾರಿಕೆ ಪತ್ರದಲ್ಲಿನ ಷರತ್ತುಗಳನ್ವಯ ಪಾಲುದಾರರ ಪೈಕಿ ಯಾರಾದರು ಒಬ್ಬರು ಮೃತರಾದರೇ ಅವರ ವಾರಸುದಾರರನ್ನು ಪಾಲುದಾರರು ಎಂದು ತರಬೇಕಾಗುತ್ತದೆ ಎಂದರೆ ಸರಿ, ಅದು ನಮ್ಮ ಪರಸ್ಪರ ತಿಳುವಳಿಕೆ ಮೇಲೆ ಮಾಡಬಹುದು.

2. ಸುಶೀಲಾಬಾಯಿಯವರು ದಿಃ13.08.2011 ರಂದು ಮೃತರಾಗಿದ್ದರು ಎಂದರೆ ಸರಿ. ದಿಃ13.08.2011 ರಂದು ಸುಶೀಲಾಬಾಯಿರವರ ಮರಣಾನಂತರ ವಾದಿ ವಾರಸುದಾರರ ನಾತೆಯಿಂದ ಪಾಲುದಾರಿಕೆ ಸಂಸ್ಥೆಯ ಪಾಲುದಾರರಾಗುತ್ತಾರೆ ಎಂದರೆ ಸರಿಯಲ್ಲ. ನಿಡಿ-414 ರನ್ವಯ ಪುನಃ ಒಂದು ಪಾಲುದಾರಿಕೆ ಸಂಸ್ಥೆಯನ್ನು ನಾವು ಹುಟ್ಟುಹಾಕಿದ್ದೇವೆ ಎಂದರೆ ಸರಿ. ನಿಡಿ-414 ಮಾಡುವಲ್ಲಿ ವಾದಿಯ ಒಪ್ಪಿಗೆ ಇರಲಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ. ನಿಡಿ-414 ಕ್ಕೆ ವಾದಿ ಪಕ್ಷಗಾರರಾಗಲೀ ಒಪ್ಪಿಗೆ ಸೂಚಿಸುವ ಸಾಕ್ಷಿಯಾಗಲೀ ಸಹಿ ಹಾಕಿಲ್ಲ ಎಂದರೆ ಸರಿ. ನಿಡಿ-414 ಅಸ್ತಿತ್ವಕ್ಕೆ ಬರುವ ಕಾಲಕ್ಕೆ ನಮ್ಮ ಮತ್ತು ವಾದಿಯ ನಡುವೆ ಕಂದಾಯ ಇಲಾಖೆಯಲ್ಲಿ ಬೇರೆ ಬೇರೆ ಪ್ರಕರಣಗಳು ಚಾಲ್ತಿ ಇತ್ತು ಎಂದರೆ ಸರಿ. ದಾವಾ ಐಟಂ ನಂ.1 ನೇ ಸ್ವತ್ತಿನ ಮೇಲೆ ಹೇಗಾದರು ಮಾಡಿ ನಮ್ಮ ಹಕ್ಕನ್ನು ಸಾಧನೆ ಮಾಡುವ ಉದ್ದೇಶದಿಂದ ನಿಡಿ-414 ಖೊಟ್ಟಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ-414 ದಾಖಲೆಯನ್ನು ಹಾಜರ ಮಾಡಿದ ನಂತರ ಅದರ ಅಡಿಯಲ್ಲಿ ಕಂದಾಯ ಇಲಾಖೆಯಲ್ಲಿ ಆದೇಶ ಆಗಿತ್ತು ಎಂದರೆ ಸಾಕ್ಷಿ ನಾನು ಹಾಜರಪಡಿಸಿಲ್ಲ ಎಂದು ಹೇಳುತ್ತಾರೆ. ನಿಡಿ-414 ನ್ನು ಹಾಜರಪಡಿಸಿದ ಆಧಾರದಲ್ಲಿ ಆದೇಶ ಮಾಡಿಸಿ ನಿಡಿ-39 ರಂತೆ ಹೆಸರು ಉತಾರೆಯಲ್ಲಿ ನಮೂದು ಆಗಿದೆ ಎಂದರೆ ಸಾಕ್ಷಿ ಕೆ.ಎಸ್.ಎಫ್.ಸಿಯಿಂದ ಭೋಜಾ ತಿರುವಳಿ ಆದ ಬಗ್ಗೆ ಪತ್ರವನ್ನು ಹಾಜರಪಡಿಸಿದೆ ಎಂದು ಹೇಳುತ್ತಾರೆ. ನಿಡಿ-405 ನ್ನು ಕೆ.ಎಸ್.ಎಫ್.ಸಿ ರವರು ಸುಶೀಲಾಬಾಯಿ ಮತ್ತು ನನ್ನ ಪರವಾಗಿ ಬರೆದುಕೊಟ್ಟ ದಾಖಲೆ ಆಗಿದೆ ಎಂದರೆ ಸಾಕ್ಷಿಯು ಪಾಲುದಾರಿಕೆ ಸಂಸ್ಥೆಯ ಪರವಾಗಿ

ಬರೆದುಕೊಟ್ಟಿದ್ದು ಎಂದು ಹೇಳುತ್ತಾರೆ. ಸಿಟಿಎಸ್ 5325 ಯಾವತ್ತು ಪಾಲುದಾರಿಕೆ ಸಂಸ್ದೆಯ ಸ್ವತ್ತಾಗಿದಿಲ್ಲ, ಈಗಲೂ ಕೂಡ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ವಾದಿ ಹಿಸ್ಸೆ ಹಕ್ಕು ಕೇಳುತ್ತಾನೆ ಎಂದು ಅದು ಪಾಲುದಾರಿಕೆ ಸ್ವತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಮತ್ತು 4 ವಾಟ್ನಿಯಲ್ಲಿ ಸುಶೀಲಾಬಾಯಿಗೆ ಬಂದವು ಎಂದರೆ ಸರಿ. ಸದರಿ ಸ್ವತ್ತುಗಳು ಸುಶೀಲಾಬಾಯಿಯ ಕಬ್ಜೆಯಲ್ಲಿ ಇದ್ದವು ಎಂದರೆ ಸಾಕ್ಷಿ ನನ್ನ ಮತ್ತು ಸುಶೀಲಾಬಾಯಿರವರ ಕಬ್ಜೆಯಲ್ಲಿ ಇದ್ದವು ಎಂದು ಹೇಳುತ್ತಾರೆ. ಜಂಟಿ ಕಬ್ಜೆಯಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ದಾವಾ ಐಟಂ ನಂ.2 ನೇ ಸ್ವತ್ತು ಸಹ ಸುಶೀಲಾಬಾಯಿರವರ ಸ್ವಂತ ಸ್ವತ್ತು ಎಂದರೆ ಸರಿ. ದಾವಾ ಐಟಂ ನಂ.1 ರಿಂದ 4 ರಲ್ಲಿ ನನಗೂ ಹಾಗೂ ವಾದಿಯ ಸಮಾನವಾದ ಹಕ್ಕು ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

(ಶ್ರೀ.ಎಸ್.ಕೆ.ಎಚ್ ವಕೀಲರು ಪ್ರತಿವಾದಿ 2 ಎ ದಿಂದ 2 ಈ ರವರ ಪರವಾಗಿ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ